ಪರೀಕ್ಷೆಯಾರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಆರನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವಸ್ಥಳ ಕಾಲಗಳಲ್ಲಿ ನಡೆಯುವುದು.

8. (1) ಪ್ರಥಮ ಭಾಷೆಗೆ ನಿಯಮಿತವಾಗಿರುವ ಪೂರ್ಣಾಂಕದಲ್ಲಿ ಶೇಕಡಾ 35ನ್ನೂ

(2) ಇತರ ವಿಷಯಗಳಲ್ಲಿ ಒಂದೊಂದರಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 30ನ್ನೂ ಪಡೆಯದವರು ತೇರ್ಗಡೆಯಾಗುವುದಿಲ್ಲ.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ, ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

9. ತೇರ್ಗಡೆಯಾದವರಲ್ಲಿ ಒಬ್ಬೊಬ್ಬರಿಗೂ ದೇಶೀಯ ಪರೀಕ್ಷಾ ನಿರ್ವಾಹಕ ಸಭಾಧ್ಯಕ್ಷರು ರುಜು ಮಾಡಿದ ಒಂದು ನಿರ್ಣಯ ಪತ್ರಿಕೆಯು ಕೊಡಲ್ಪಡುವುದು.

ಇದರಲ್ಲಿ ಪರೀಕ್ಷೆಯ ಕಾಲ, ತೇರ್ಗಡೆಯಾದವನು ಪರೀಕ್ಷಿಸಲ್ಪಟ್ಟ ಪ್ರಥಮ ದ್ವಿತೀಯ ಭಾಷೆಗಳು ಮತ್ತು ಇತರ ವಿಷಯಗಳು, ಅವನನ್ನು ಸೇರಿಸಿರುವ ವರ್ಗ, ಈ ಅಂಕಗಳೆಲ್ಲಾ ವಿವರಿಸಲ್ಪಡುವುವು.

ಹೆಚ್. ಜೆ. ಭಾಭಾ,
ಎಜ್ಯುಕೇಷನ್ ಸೆಕ್ರಟೆರಿ.

ಫಾರೆಸ್ಟ್ ಇಲಾಖೆ.

ನೋಟಿಸ್.

ತಾರೀಖು 29ನೇ ಆಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇರ್ಗ್ಲಾಡ್ ಪೋರ್ಟರು ಬ್ರದರಸ್‌ರ ಡಿಟೋ	„ 170
1	ಮದ್ರಾಸ್ ಓಕ್ಸ್‌ರವರ ಡಿಟೋ	„ 250
1	ಡಿಟೋ ಡಿಟೋ ಡಿಟೋ	„ 188
1	ಡಿಟೋ ಪೋರ್ಟ್ಯಾಮ್‌ರವರ ಡಿಟೋ	„ 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ, ಅಸಲ್ ಖರೀದಿಯಲ್ಲಿ ಶೇಕಡಾ $12\frac{1}{2}$ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ತಾರೀಖು 25ನೇ ಫಿಬ್ರವರಿ 1895.

ಸ್ ೧೮೭೮ನೇ ಇಸವಿ ಜೂನ್ 8ನೇ ಮಾ|| ಮೈಸೂರ್ ಫಾರೆಸ್ಟ್ ರೂಲ್ಸ್ 9ನೇ ಪ್ರಕರಣ ಅನುಸರಿಸಿ, ಈ ಕೆಳಗೆ ನಮೂದು ಮಾಡುವ ಗಡಿ ವಿಂಗಡಿಸಿದ ಸ್ಟೇಟ್ ಫಾರೆಸ್ಟಿನ ಜಪ್ತುಗರ್ಡಿಗಳನ್ನು, ಸಮಸ್ತರ ತಿಳುವಳಿಕೆ ಬ್ಯು ಪ್ರಕಟಿಸಲ್ಪಟ್ಟಿದೆ.

ಚಿಂತಾಮಣಿ ತಾಲ್ಲೂಕು ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು ಸಹ.

ರಾಯಲ್ ಮೂಡು ಫಾರೆಸ್ಟ್.

ಅಂದಾಜು ಸ್ಕ್ವೇರ್ ಮೈಲಿಗಳ ವಿಸ್ತೀರ್ಣ—$21\frac{1}{2}$.

ಮುದಿವಡಗು ಸುಂಣಕಲ್ ಜಂಗಲ್ ಬ್ಲಾಕ್ ನಂಬರ್ I.

ಪೂರ್ವ—ಮುದರಾನಿಪ್ರಸಿಡೆನ್ಸಿ ಕಡಪ ಡಿಸ್ಟ್ರಿಕ್ಟ್ ಸರಹದ್ದಾಗಿ ಡಿಮಾರ್ಕೇಷನ್ ಲೈನ್, ಮುದಿವಡಗು ಗ್ರಾಮದ (ಸರ್ವೆ 144ನೇ ನಂಬರ್) ದೊಡ್ಡೇಶ್ವರ ಮೂಳೇಗುಟ್ಟದಿಂದ ಹಾದು ಅದೇ ಗ್ರಾಮದ ಸರ್ವೆ ನಂಬರ್ 143—142—345ರ ಮಧ್ಯದಲ್ಲಿ ಹೋಗುತ್ತದೆ.

ಪೂರ್ವ—ಮದರಾಸ್ ಪ್ರಸಿಡೆನ್ಸಿ ಕಡಪ ಮತ್ತು ನಾರ್ತಾರ್‌ಕಾಟ್ ಡಿಸ್ಟ್ರಿಕ್ಟು ಸರಹದ್ದಾಗಿ ಸದರೀ ಲೈನ್, ಗುಂಟ್ಟಪಲ್ಲಿ ಸರ್ವೆ ನಂಬರ್ 16ನೇ ಮಧ್ಯದಲ್ಲಿ ಹಾದು ಬೆಂಗಳೂರ್, ಕಡಪ ಹೈ ರೋಡ್ ಬೌಂಡರಿಕಲ್ಲು ಮತ್ತು 3 ಬಾಂದಿನ ಸಮೀಪದಲ್ಲಿ ಹೋಗಿ ಸದರೀ ಗ್ರಾಮದ 17—18ನೇ ಸರ್ವೆ ನಂಬರಿನಲ್ಲಿ ಹಾದು ಸುಂಣಕಲ್ಲು ಸರ್ವೆ ನಂಬರ್ 20 ಜೀಪಮಾಕಲ್‌ಹಳ್ಳಿ ಗ್ರಾಮದ 47—52 ಮೂಲಗೊಲ್ಲಪಲ್ಲಿ ಸರ್ವೆ ನಂಬರ್ 1 ಕಮತಂಪಲ್ಲಿ ಸರ್ವೆ ನಂಬರ್ 100 ಈ ನಂಬರುಗಳ ಮಧ್ಯೆ ಹೋಗುತ್ತದೆ.

ದಕ್ಷಿಣ—ಮೇಲಿನ ಸರಹದ್ದಿನಿಂದ ಸದರೀ ಲೈನ್, ಸದರೀ ಗ್ರಾಮದ ಸರ್ವೆ ನಂಬರ್ 85 ಪಂದಿವಾರಪಲ್ಲಿ ಸರ್ವೆ ನಂಬರ್ 15 ನಾತನೂರ ಸರ್ವೆ ನಂಬರ್ 5 ಕೊತ್ತಪ್ಯಾಟೆ ಸರ್ವೆ ನಂಬರ್ 57—137—127—111—112—94—89 ಮರಿಮಾಕಲಪಲ್ಲಿ ಸರ್ವೆ ನಂಬರ್ 47 ಕುರಪಲ್ಲಿ ಸರ್ವೆ ನಂಬರ್ 15 ತುಪ್ಪಲ್ಲಿ ಸರ್ವೆ ನಂಬರ್ 62 ಈ ನಂಬರುಗಳ ಮಧ್ಯೆ ಹೋಗಿ ಬೆಂಗಳೂರ್, ಕಡಪ ಹೈ ರೋಡ್ 64ನೇ ಮೈಲಿ ಕಲ್ಲು ಹತ್ತರ ಕಲಿಯುತ್ತದೆ.

ಪಶ್ಚಿಮ—ಮೇಲಿನ ಸರಹದ್ದಿನಿಂದ ಡಿವಾರ್ಕೇಷನ್ ಲೈನು, ಸದರೀ ರೋಡಿನ 68ನೇ ಮೈಲಿ ಕಲ್ಲುವರಿವಿಗೆ ಪಶ್ಚಿಮ ದಿಕ್ಕಿನ ಸರಹದ್ದಾಗಿ ಹೋಗಿ 4—5ನೇ ಫರ್‌ಲಾಂಗ್ ಕಲ್ಲಿನ ಮಧ್ಯದಲ್ಲಿ ಸದರೀ ರೋಡು ಧಾಟಿಕೊಂಡು ಸುಟ್ಟಪಲ್ಲಿ ಸರ್ವೆ ನಂಬರ್ 14 ತುಮ್ಮಲಪಲ್ಲಿ ಸರ್ವೆ ನಂಬರ್ 26 ಮಲಕೊಟಕಪಲ್ಲಿ ಸರ್ವೆ ನಂಬರ್ 1 ಮುದಿಮಡಗು ಸರ್ವೆ ನಂಬರ್ 140—141 ಬೋಡಿರಡ್ಡಿಪಲ್ಲಿ ಸರ್ವೆ ನಂಬರ್ 19—1 ಈ ಸರ್ವೆ ನಂಬರುಗಳ ಮಧ್ಯೆ ಹೋಗಿ ಪ್ರಾರಂಭ ಸ್ಥಳಕ್ಕೆ ಕಲಿಯುತ್ತದೆ.

ಬ್ಲಾಕ್ ನಂಬರ್ II.

ವಲ್ಲಿಕೊಂಡ ಜಂಗಲ್.

ಅಂದಾಜು ಸ್ಕ್ವೇಯರ್ ಮೈಲಿ $7\frac{1}{7}$.

ಕೊಟ್ಲವಾರಪಲ್ಲಿ ಸರ್ವೆ ನಂಬರ್ 17ರಿಂದ ಪೂರ್ವ ಡಿವಾರ್ಕೇಷನ್ ಲೈನ್, ಪ್ರಾರಂಭಿಸಿ ವ್ಯಾಪಲ್‌ಪಲ್ಲಿ ಸರ್ವೆ ನಂಬರ್ 20—119 ತಿಮ್ಮನಪಲ್ಲಿ ಸರ್ವೆ ನಂಬರ್ 120—142 ಮಂಜೆವಾರಪಲ್ಲಿ ಸರ್ವೆ ನಂಬರ್ 93 ಈ ನಂಬರುಗಳ ಮಧ್ಯೆ ಹೋಗುತ್ತದೆ.

ದಕ್ಷಿಣ—ಅಲ್ಲಿಂದ ಸದರೀ ಲೈನು, ಬಸವನಪಲ್ಲಿ ಸರ್ವೆ ನಂಬರ್ 22 ಗುಡಿಸವಾರಪಲ್ಲಿ ಸರ್ವೆ ನಂಬರ್ 29 ವುಪ್ಪರಪಲ್ಲಿ ಸರ್ವೆ ನಂಬರ್ 42 ಯರಂವಾರಿಪಲ್ಲಿ ಸರ್ವೆ ನಂಬರ್ 54 ಇವುಗಳ ಮಧ್ಯೆ ಹೋಗುತ್ತದೆ.

ಪಶ್ಚಿಮ—ಮೇಲಿನ ಸರಹದ್ದಿನಿಂದ ಸದರೀ ಲೈನು, ಪಾತ್ತೂರು ಸರ್ವೆ ನಂಬರ್ 45 ಕದರಂಪಲ್ಲಿ ಸರ್ವೆ ನಂಬರ್ 26 ಬಲ್ಲುತ ಮರಿ ಸರ್ವೆ ನಂಬರ್ 11—107 ಕೊತ್ತಪಲ್ಲಿ ಸರ್ವೆ ನಂಬರ್ 36—11—10—100—99—50 ಕೊರಿಗೆಪಲ್ಲಿ ಸರ್ವೆ ನಂಬರ್ 81—96 ಇವುಗಳ ಮಧ್ಯೆ ಹೋಗುತ್ತದೆ.

ಉತ್ತರ—ಮದರಾಸ್ ಪ್ರಸಿಡೆನ್ಸಿ ಕಡಪ ಡಿಸ್ಟ್ರಿಕ್ಟು ಸರಹದ್ದಾಗಿ ಕೊರಿಗೆಪಲ್ಲಿ ಸರ್ವೆ ನಂಬರ್ 81—96 ವಂಗಸವಾರಪಲ್ಲಿ ಸರ್ವೆ ನಂಬರ್ 52 ಕೊತ್ತಪಲ್ಲಿ ಸರ್ವೆ ನಂಬರ್ 50—99 ಕೊಕಲೆವಾರಪಲ್ಲಿ ಸರ್ವೆ ನಂಬರ್ 1 ಇವುಗಳ ಮಧ್ಯೆ ಹೋಗಿ ಪ್ರಾರಂಭ ಸ್ಥಳಕ್ಕೆ ಕಲಿಯುತ್ತೆ.

ಬ್ಲಾಕ್ ನಂಬರ್ III

ವಾಲೀಶ್ವರಬೆಟ್ಟದ ಜಂಗಲ್.

ಅಂದಾಜು ಸ್ಕ್ವೇಯರ್ ಮೈಲಿಗಳು.

ಪೂರ್ವ—ಮದರಾಸ್ ಪ್ರಸಿಡೆನ್ಸಿ ನಾರ್ತಾರ್‌ಕಾಟು ಡಿಸ್ಟ್ರಿಕ್ಟು ಸರಹದ್ದಿನಲ್ಲಿ ಡಿವಾರ್ಕೇಷನ್ ಲೈನು, ಪ್ರಾರಂಭವಾಗಿ ಬಂಡಾಲಪಲ್ಲಿ ಸರ್ವೆ ನಂಬರ್ 8 ಈನಂಪಲ್ಲಿ ಸರ್ವೆ ನಂಬರ್ 40—28 ಗುಟ್ಟಪಲ್ಲಿ ಸರ್ವೆ ನಂಬರ್ 34 ಇವುಗಳ ಮಧ್ಯೆ ಹೋಗುತ್ತದೆ.

ದಕ್ಷಿಣ—ಮೇಲಿನ ಸರಹದ್ದಿನಿಂದ ಗುಟ್ಟಪಲ್ಲಿ ಸರ್ವೆ ನಂಬರ್ 33—34 ಈನಂಪಲ್ಲಿ ಸರ್ವೆ ನಂಬರ್ 4 ಬ್ರಾಹ್ಮಣಪಲ್ಲಿ ಸರ್ವೆ ನಂಬರ್ 10—56 ಬಜ್ಜುವಾರಪಲ್ಲಿ ಸರ್ವೆ ನಂಬರ್ 47 ಇವುಗಳ ಮಧ್ಯೆ ಲೈನು, ಹೋಗುತ್ತೆ.

ಪಶ್ಚಿಮ—ಮೇಲಿನ ಸರಹದ್ದಿನಿಂದ ಲೈನು, ಸದರೀ ಗ್ರಾಮದ ಸರ್ವೆ ನಂಬರ್ 16ನೇದರಲ್ಲಿ ಹಾದು ಯಿಲ್‌ದೊಣೆ ಗ್ರಾಮದ ಸರ್ವೆ ನಂಬರ್ 197ನೇ ಮಧ್ಯೆ ಹೋಗುತ್ತೆ.

ಉತ್ತರ—ಸದರೀ ದಿಕ್ಕಿನಿಂದ ಡಿವಾರ್ಕೇಷನ್ ಲೈನ್, ಗಂಗರಹಾನಪಲ್ಲಿ ಸರ್ವೆ ನಂಬರ್ 1 ಮುಚ್ಚುವಾರಪಲ್ಲಿ ಸರ್ವೆ ನಂಬರ್ 35—41 ಇವುಗಳ ಮಧ್ಯೆ ಹೋಗಿ ಪ್ರಾರಂಭ ಸ್ಥಳಕ್ಕೆ ಕಲಿಯುತ್ತೆ.

ಸ್ ೯೯ 1878ನೇ ಇಸವಿ ಜೂನ್ 8ನೆ ಮರ್ತುಂ ಮೈಸೂರ್ ಫಾರೆಸ್ಟು ರೂಲ್ಸ್ 9ನೇ ಪ್ರಕರಣ ಅನುಸರಿಸಿ, ಈ ಕೆಳಗೆ ನಮೂದುಮಾಡುವ ಗಡಿ ವಿಂಗಡಿಸಿದ ಸ್ಟೇಟ್ ಫಾರೆಸ್ಟಿನ ಚತುರ್ಗಡಿಗಳನ್ನು ಸಮಸ್ತರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿದೆ.

ಚಿಂತಾಮಣಿ ತಾಲ್ಲೂಕು ಅಡ್ಡಗೆಲ್ ನೆಲವಂಕಿ ಜಂಗಲ್.

ಅಂದಾಜು ಸ್ಕ್ವೇಯರ್ ಮೈಲ್ 53¾.

ಪೂರ್ವ—ಬೂರಗಮಾಕಲ್‌ಪಲ್ಲಿ ಸರ್ವೆ ನಂಬರ್ 44ನೇದರಲ್ಲಿ ಡಿವಾರ್ಕೇಷನ್ ಲೈನು, ಪ್ರಾರಂಭವಾಗಿ ತುಪ್ಪಲ್ಲಿ ಸರ್ವೆ ನಂಬರ್ 32ನೇ ಮಧ್ಯದಲ್ಲಿ ಲೈನು ಹೋಗುತ್ತದೆ.

ದಕ್ಷಿಣ—ಸದರಿ ಲೈನು ಮುಂಚ್ಚಿನೇಳ್ಳುಕೋಟೆ ಸರ್ವೆ ನಂಬರ್ 188 ಗೊಲ್ಲಪಲ್ಲಿ ಸರ್ವೆ ನಂಬರ್ 16 ಪಾತನೆಲವಂಕಿ ಸರ್ವೆ ನಂಬರ್ 18 ಸೊಣಪಲ್ಲಿ ಸರ್ವೆ ನಂಬರ್ 14—30 ಕುರಪಲ್ಲಿ ಸರ್ವೆ ನಂಬರ್ 69 ಯಿವುಗಳ ಮಧ್ಯೆ ಮತ್ತು ತಿಮ್ಮನಪಲ್ಲಿ ಖರಾಬ್ ಜಮೀನ್ ಮಧ್ಯದಲ್ಲಿ ಹೋಗಿ ಕೋಡಿಪಲ್ಲಿ ಸರ್ವೆ ನಂಬರ್ 17ನೇ ಮಧ್ಯೆ ಹೋಗುತ್ತದೆ.

ಪಶ್ಚಿಮ—ಮೇಲಿನ ಹದ್ದಿನಿಂದ ಲೈನ್, ದಿಗವಮಾರಂಪಲ್ಲಿ ಸರ್ವೆ 61—67—64 ತಿಮ್ಮನಪಲ್ಲಿ ಸರ್ವೆ ನಂಬರ್ 26—40—66—72—52 ಕಂಭಾಲಪಲ್ಲಿ ಸರ್ವೆ ನಂಬರ್ 27 ಯಿವುಗಳ ಮಧ್ಯೆ ಲೈನು, ಹೋಗುತ್ತದೆ.

ಉತ್ತರ—ಸದರೀ ಹದ್ದಿನಿಂದ ಲೈನು ತುಮ್ಮಲವಾಕಪಲ್ಲಿ ಸರ್ವೆ ನಂಬರ್ 39—28—112 ಅಡ್ಡಗಲ್ ಸರ್ವೆ ನಂಬರಿ 87—79—189—156 ಯಿವುಗಳ ಮಧ್ಯೆ ಹಾದು ಪ್ರಾರಂಭ ಸ್ಥಳಕ್ಕೆ ಲೈನು ಕಲಿಯುತ್ತೆ.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂಡೀದುರ್ಗ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ॥ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 327.

ಮುಳಬಾಗಲಲ್ಲಿ ಮೃತಪಟ್ಟ ಅಕಾರಪಾಕಂ ನಾರಣಯ್ಯನ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಕೋಲಾರದಲ್ಲಿರುವ ರಂಗಪ್ಪ ವುರಫ್ ರಂಗಯ್ಯಂಗಾರು, ಮೃತಪಟ್ಟ ಸದರೀ ನಾರಣಯ್ಯನಿಗೆ, ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಮುಳಬಾಗಲ್ ಸ್ಥಳದ ಅಕಾರಪಾಕಂ ರಂಗಪ್ಪ ವುರಫ್ ರಂಗಯ್ಯಂಗಾರು, ಮುಳಬಾಗಲ್ ವಾಸಸ್ಥರಾಗಿ ಮೃತಪಟ್ಟ ನಾರಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಸ್ ನೂಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಪ್ಪ ವುರಫ್ ರಂಗಯ್ಯಂಗಾರು ಅರ್ಜಿಯನ್ನು ಸ॥ 1895ನೇ ಇಸವಿ ಜನ್ವರಿ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1895ನೇ ಇಸವಿ ಮಾರ್ಚಿ ತಿಂಗಳ 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್
ಡಿಸ್ಟ್ರಿಕ್ಟು ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1 ಕೆರೆ ಕಂಟ್ರಿಬ್ಯೂರ್ಷನ್ ಕಂದಾಯದ ಬಾಕೀದಾರರಾದ ಈ ಕೆಳಗೆ ನಮೂದಿಸುವ ಜೋಡೀದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಈಚೇರಿಯಲ್ಲಿ ಈ ಕೆಳಗೆ ನಮೂದಾಗುವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇಧೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2 ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ ಆಗಿರುತ್ತೆ.

3 ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಕೇಕಡಾ 25ನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4 ಅಂತಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ